ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 11-11-2000

# *ಸಂಪೂರ್ಣತೆಯ ಸಮೀಪತೆಯಿಂದ ಪ್ರತ್ಯಕ್ಷತೆಯ ಶ್ರೇಷ್ಠ ಸಮಯವನ್ನು ಸಮೀಪದಲ್ಲಿ ತೆಗೆದುಕೊಂಡು ಬನ್ನಿ*

(सम्पूर्णता की समीपता द्वारा प्रत्यक्षता के श्रेष्ठ समय को समीप लाओ)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬಾಪ್‌ದಾದಾರವರು ತಮ್ಮ ಹೋಲಿಯಸ್ಟ್(ಪವಿತ್ರ). ಹೈಯೆಸ್ಟ(ಶ್ರೇಷ್ಠ), ಲಕ್ಕಿಯಸ್ಟ್ (ಅದೃಷ್ಟವಂತ), ಸ್ವೀಟೆಸ್ಟ್ (ಮಧುರ) ಮಕ್ಕಳನ್ನು ನೋಡುತ್ತಿದ್ದರು. ಇಡೀ ವಿಶ್ವದಲ್ಲಿ ಸಮಯ ಪ್ರತಿ ಸಮಯ ಪವಿತ್ರ ಆತ್ಮರು ಬರುತ್ತಾ ಇರುತ್ತಾರೆ. ನೀವು ಸಹ ಪವಿತ್ರವಾಗಿದ್ದೀರಿ ಆದರೆ ನೀವು ಶ್ರೇಷ್ಠ ಆತ್ಮರು ಪ್ರಕೃತಿಯ ಮೇಲೆ ವಿಜಯಿಯಾಗಿ, ಪ್ರಕೃತಿಯನ್ನು ಸಹ ಸತೋಪ್ರಧಾನವನ್ನಾಗಿ ಮಾಡಿಬಿಡುತ್ತೀರಿ. ನಿಮ್ಮ ಪವಿತ್ರತೆಯ ಶಕ್ತಿ ಪ್ರಕೃತಿಯನ್ನು ಸಹ ಸತೋಪ್ರಧಾನ, ಪವಿತ್ರರನ್ನಾಗಿ ಮಾಡುತ್ತದೆ. ಆದ್ದರಿಂದ ನೀವೆಲ್ಲಾ ಆತ್ಮರು ಪ್ರಕೃತಿಯ ಈ ಶರೀರವನ್ನು ಸಹ ಪವಿತ್ರವಾದುದ್ದನ್ನೇ ಪಡೆದುಕೊಳ್ಳುತ್ತೀರಿ. ನಿಮ್ಮ ಪವಿತ್ರತೆಯ ಶಕ್ತಿ ವಿಶ್ವದ ಜಡ, ಚೈತನ್ಯ, ಸರ್ವರನ್ನು ಪವಿತ್ರರನ್ನಾಗಿ ಮಾಡಿಬಿಡುತ್ತದೆ ಆದ್ದರಿಂದ ನಿಮಗೆ ಪವಿತ್ರ ಶರೀರವು ಪ್ರಾಪ್ತಿಯಾಗುತ್ತದೆ. ಆತ್ಮವೂ ಪವಿತ್ರ, ಶರೀರವೂ ಪವಿತ್ರ ಹಾಗೂ ಪ್ರಕೃತಿಯ ಸಾಧನಗಳು ಪಾವನವಾಗಿರುತ್ತದೆ. ಆದ್ದರಿಂದ ಇಡೀ ವಿಶ್ವದಲ್ಲಿ ಪವಿತ್ರ ಆತ್ಮರಾಗಿದ್ದೀರಿ. ಪವಿತ್ರ ಆತ್ಮರಾಗಿದ್ದೀರಾ? ತಮ್ಮನ್ನು ತಾವು- ನಾವು ವಿಶ್ವದಲ್ಲಿ ಹೋಲಿಯಸ್ಟ್ ಆತ್ಮರು ಎಂದು ತಿಳಿಯುತ್ತೀರಾ? ಹೈಯೆಸ್ಟ್ ಸಹ ಆಗಿದ್ದೀರಿ, ಏಕೆ ಹೈಯೆಸ್ಟ್ ಆಗಿದ್ದೀರಿ? ಏಕೆಂದರೆ ಶ್ರೇಷ್ಠಾತಿ ಶ್ರೇಷ್ಠ ಭಗವಂತನನ್ನು ಗುರುತಿಸಿದಿರಿ. ಶ್ರೇಷ್ಠಾತಿ ಶ್ರೇಷ್ಠ

ತಂದೆಯ ಮೂಲಕ ಶ್ರೇಷ್ಠಾತಿ ಶ್ರೇಷ್ಠ ಆತ್ಮರಾಗಿಬಿಟ್ಟಿದ್ದೀರಿ. ಸಾಧಾರಣ ಸ್ಮೃತಿ ವೃತ್ತಿ, ದೃಷ್ಟಿ, ಕೃತಿ ಎಲ್ಲವೂ ಬದಲಾಗಿ ಶ್ರೇಷ್ಠ ಸ್ಮೃತಿ ಸ್ವರೂಪ, ಶ್ರೇಷ್ಠ ವೃತ್ತಿ, ಶ್ರೇಷ್ಠ ದೃಷ್ಟಿ ಆಗಿ ಹೋಯಿತು. ಯಾರನ್ನೇ ಭೇಟಿಯಾದಾಗ ಯಾವ ವೃತ್ತಿಯಿಂದ ಭೇಟಿಯಾಗುತ್ತೀರಿ? ಬ್ರದರ್ ಹುಡ್ (ಸಹೋದರ) ವೃತ್ತಿಯಿಂದ, ಆತ್ಮಿಕ ದೃಷ್ಟಿಯಿಂದ, ಕಲ್ಯಾಣದ ಭಾವನೆಯಿಂದ, ಪ್ರಭು ಪರಿವಾರದ ಭಾವದಿಂದ. ಎಂದ ಮೇಲೆ ಶ್ರೇಷ್ಠರಾಗಿ ಬಿಟ್ಟಿದ್ಧೀರಿ ಅಲ್ಲವೇ? ಬದಲಾಗಿ ಬಿಟ್ಟಿದ್ದೀರಲ್ಲವೇ! ಹಾಗೂ ಎಷ್ಟು ಅದೃಷ್ಟವಂತರಾಗಿದ್ದೀರಿ? ಯಾವುದೋ ಜ್ಯೋತಿಷಿ ನಿಮ್ಮ ಭಾಗ್ಯದ ಗೆರೆಯನ್ನು ಎಳೆದಿಲ್ಲ, ಆದರೆ ಸ್ವಯಂ ಭಾಗ್ಯವಿಧಾತ ನಿಮ್ಮ ಭಾಗ್ಯದ ಗೆರೆಯನ್ನು ಬರೆದಿದ್ದಾರೆ. ಹಾಗೂ ಎಷ್ಟು ದೊಡ್ಡ ಗ್ಯಾರಂಟಿಯನ್ನು ಕೊಟ್ಟಿದ್ದಾರೆ? 21 ಜನ್ಮದ ಅದೃಷ್ಟದ ಗೆರೆಯ ಅವಿನಾಶಿ ಗ್ಯಾರಂಟಿ ಕೊಟ್ಟಿದ್ದಾರೆ. ಒಂದು ಜನ್ಮದ್ದಲ್ಲ, 21 ಜನ್ಮ ಎಂದೂ ಸಹ ದುಃಖ ಹಾಗೂ ಅಶಾಂತಿಯ ಅನುಭವವಾಗುವುದಿಲ್ಲ. ಸದಾ ಸುಖಿ ಆಗಿರುವಿರಿ. ಜೀವನದಲ್ಲಿ ಮೂರು ಮಾತುಗಳು ಬೇಕಾಗಿರುತ್ತದೆ- ಹೆಲ್ತ್(ಆರೋಗ್ಯ), ವೆಲ್ತ್(ಸಂಪತ್ತು), ಹಾಗೂ ಹ್ಯಾಪಿನೆಸ್(ಸಂತೋಷ). ಈ ಮೂರು ಸಹ ನಿಮ್ಮೆಲ್ಲರಿಗೂ ತಂದೆಯ ಮೂಲಕ ವಾರಸತ್ವದಲ್ಲಿ ಪ್ರಾಪ್ತಿಯಾಗಿ ಹೋಯಿತು. ಗ್ಯಾರಂಟಿ ಆಗಿದೆ ಅಲ್ಲವೇ, 21 ಜನ್ಮಕ್ಕಾಗಿ? ಎಲ್ಲರೂ ಗ್ಯಾರಂಟಿ ಪಡೆದುಕೊಂಡಿದ್ದೀರಾ? ಹಿಂದೆ ಕುಳಿತವರಿಗೆ ಗ್ಯಾರಂಟಿ ಸಿಕ್ಕಿದೆಯಾ? ಎಲ್ಲರೂ ಕೈ ಎತ್ತುತ್ತಿದ್ದಾರೆ, ಬಹಳ ಒಳ್ಳೆಯದು. ತಂದೆಗೆ ಮಕ್ಕಳಾಗುವುದು ಎಂದರೆ ತಂದೆಯ ಮೂಲಕ ವ್ಯಾರಸತ್ವ ಸಿಗುವುದು. ಮಕ್ಕಳು ಆಗುತ್ತಿಲ್ಲ, ಆಗುತ್ತಿದ್ದೀರಾ? ಮಕ್ಕಳು ಆಗುತ್ತಿದ್ದೀರಾ? ಅಥವಾ ಆಗಿಬಿಟ್ಟಿದ್ದೀರಾ? ಮಕ್ಕಳು ಆಗಬೇಕಾಗಿಲ್ಲ. ಜನ್ಮ ಪಡೆದಿರಿ ಹಾಗೂ ಮಕ್ಕಳಾದಿರಿ. ಜನ್ಮ ತೆಗೆದುಕೊಳ್ಳುತ್ತಲೇ ತಂದೆಯ ವಾರಸತ್ವಕ್ಕೆ ಅಧಿಕಾರಿಯಾಗಿಬಿಟ್ಟಿದ್ದೀರಿ. ಎಂದ ಮೇಲೆ ಇಂತಹ ಶ್ರೇಷ್ಠ ಭಾಗ್ಯವನ್ನು ತಂದೆಯ ಮೂಲಕ ಈಗ ಪ್ರಾಪ್ತಿ ಮಾಡಿಕೊಂಡಿದ್ದೀರಿ. ಹಾಗೂ ರಿಚ್ಚೆಸ್ಟ್(ಶ್ರೀಮಂತರು) ಸಹ ಆಗಿದ್ದೀರಿ. ಬ್ರಾಹ್ಮಣ ಆತ್ಮ, ಕ್ಷತ್ರಿಯರಲ್ಲ, ಬ್ರಾಹ್ಮಣರು. ಬ್ರಾಹ್ಮಣ ಆತ್ಮ ನಿಶ್ಚಯದಿಂದ ಅನುಭವ ಮಾಡುತ್ತಾರೆ- ನಾನು ಶ್ರೇಷ್ಠ ಆತ್ಮ, ನಾನು ಇಂತಹವನು ಅಲ್ಲ, ಆತ್ಮ ರಿಚೆಸ್ಟ್ ಇನ್ ದಿ ವರ್ಲ್ಡ್ ಆಗಿದ್ದೇನೆ (ಪ್ರಪಂಚದಲ್ಲಿ ಎಲ್ಲರಿಗಿಂತ ಶ್ರೀಮಂತ). ಬ್ರಾಹ್ಮಣರಾಗಿದ್ದೀರಿ ಎಂದರೆ ರಿಚೆಸ್ಟ್ ಇನ್ ದಿ ವರ್ಲ್ಡ್ ಆಗಿದ್ದೀರಿ ಏಕೆಂದರೆ ಬ್ರಾಹ್ಮಣ ಆತ್ಮರಿಗಾಗಿ ಪರಮಾತ್ಮನ ನೆನಪಿನಿಂದ ಪ್ರತಿಯೊಂದು ಹೆಜ್ಜೆಯಲ್ಲಿ ಪದಮದಷ್ಟು ಸಂಪಾದನೆ ಇದೆ. ಎಂದ ಮೇಲೆ ಇಡೀ ದಿನದಲ್ಲಿ ಎಷ್ಟು ಹೆಜ್ಜೆಯನ್ನು ಹಾಕುತ್ತೀರಿ? ಯೋಚಿಸಿ. ಪ್ರತಿಯೊಂದು ಹೆಜ್ಜೆಯಲ್ಲಿ ಪದಮ, ಎಂದ ಮೇಲೆ ಇಡೀ ದಿನದಲ್ಲಿ ಎಷ್ಟು ಪದಮಗಳಾದವು? ತಂದೆಯ ಮೂಲಕ ಇಂತಹ ಆತ್ಮಗಳಾಗಿಬಿಟ್ಟಿದ್ದೀರಿ. ನಾನು ಬ್ರಾಹ್ಮಣ ಆತ್ಮ ಏನಾಗಿದ್ದೇನೆ. ಇದು ನೆನಪಿರುವುದು ಸಹ ಭಾಗ್ಯವಾಗಿದೆ. ಬಾಪ್‌ದಾದಾರವರು ಇಂದು ಪ್ರತಿಯೊಬ್ಬರ ಮಸ್ತಕದಲ್ಲಿ ಭಾಗ್ಯದ ಹೊಳೆಯುತ್ತಿರುವ ನಕ್ಷತ್ರವನ್ನು ನೋಡುತ್ತಿದ್ದರು. ನೀವು ಸಹ ತಮ್ಮ ಭಾಗ್ಯದ ನಕ್ಷತ್ರವನ್ನು ನೋಡುತ್ತಿರುವಿರಾ?

ಬಾಪ್‌ದಾದಾರವರು ಮಕ್ಕಳನ್ನು ನೋಡಿ. ಖುಷಿಯಾಗುತ್ತಾರೆಯೇ ಅಥವಾ ಮಕ್ಕಳು ತಂದೆಯನ್ನು ನೋಡಿ ಖುಷಿಯಾಗುತ್ತಾರೆಯೇ? ಯಾರು ಖುಷಿಯಾಗುತ್ತಾರೆ? ತಂದೆಯೇ ಅಥವಾ ಮಕ್ಕಳೇ? ಯಾರು? (ಮಕ್ಕಳು) ತಂದೆ ಖುಷಿಯಾಗುವುದಿಲ್ಲವೇ? ತಂದೆ ಮಕ್ಕಳನ್ನು ನೋಡಿ ಖುಷಿಯಾಗುತ್ತಾರೆ ಹಾಗೂ ಮಕ್ಕಳು ತಂದೆಯನ್ನು ನೋಡಿ ಖುಷಿಯಾಗುತ್ತಾರೆ. ಇಬ್ಬರೂ ಖುಷಿ ಪಡುತ್ತಾರೆ ಏಕೆಂದರೆ ಮಕ್ಕಳು ತಿಳಿದುಕೊಂಡಿದ್ದಾರೆ- ಈ ಪ್ರಭು ಮಿಲನ, ಈ ಪರಮಾತ್ಮನ ಪ್ರೀತಿ, ಈ ಪರಮಾತ್ಮನ ಆಸ್ತಿ(ವಾರಸತ್ವ), ಈ ಪರಮಾತ್ಮನ ಪ್ರಾಪ್ತಿಗಳು ಈಗಲೇ ಪ್ರಾಪ್ತಿಯಾಗುತ್ತದೆ." ಈಗಿಲ್ಲದಿದ್ದರೆ ಮತ್ತೆ ಇನ್ನೆಂದಿಗೂ ಇಲ್ಲ". ಹೀಗಿದೆಯಲ್ಲವೇ?

ಬಾಪ್‌ದಾದಾರವರು ಕೇವಲ ಒಂದು ವಿಷಯವನ್ನು ಮಕ್ಕಳಿಗೆ ರಿವೈಸ್ (ಪುನರಾವರ್ತನೆ) ಮಾಡಿಸುತ್ತಿದ್ದಾರೆ- ಯಾವ ಮಾತಿರಬಹುದು? ತಿಳಿದುಕೊಂಡು ಬಿಟ್ಟಿದ್ದೀರಿ. ಬಾಪ್‌ದಾದಾರವರು ಇದನ್ನೇ ರಿವೈಸ್ ಮಾಡಿಸುತ್ತಿದ್ದಾರೆ- ಈಗ ಶ್ರೇಷ್ಠ ಸಮಯವನ್ನು ಸಮೀಪ ತನ್ನಿ. ಇದು ವಿಶ್ವದ ಆತ್ಮರ ಕರೆಯಾಗಿದೆ. ಆದರೆ ತರುವವರು ಯಾರು? ನೀವಾಗಿದ್ದೀರಾ ಅಥವಾ ಬೇರೆ ಯಾರಾದರೂ ಇದ್ದಾರೆಯೇ? ಇಂತಹ ಸುಮಧುರ ಶ್ರೇಷ್ಠ ಸಮಯವನ್ನು ಸಮೀಪ ತರುವಂತಹವರು ನೀವೆಲ್ಲರೂ ಆಗಿದ್ದೀರಾ? ಒಳ್ಳೆಯದು ಮತ್ತು ಎರಡನೆಯ ಮಾತು ಸಹ ಇದೆ, ಅದನ್ನು ಸಹ ತಿಳಿದುಕೊಂಡು ಬಿಟ್ಟಿದ್ದೀರಿ ಆದ್ದರಿಂದಲೇ ಎಲ್ಲರೂ ನಗುತ್ತಿರುವಿರಿ? ಒಳ್ಳೆಯದು. ಅದರ ವಿಧಿ ಏನಾಗಿದೆ? ದಿನಾಂಕವನ್ನಾದರೂ ನಿಗದಿ ಮಾಡಿ. ಈಗ ದಿನಾಂಕ ವನ್ನು ನಿಗದಿ ಮಾಡಿದಿರಿ ಅಲ್ಲವೇ ವಿದೇಶಿಯರ ಟರ್ನ್ ನಡೆಯಬೇಕು ಎಂದು. ಈ ದಿನಾಂಕವನ್ನಂತೂ ನಿಗದಿ ಮಾಡಿಬಿಟ್ಟಿದ್ದೀರಿ. ಈ ಸಮಯವನ್ನು ಸಮೀಪ ತರುವಂತಹ ಆತ್ಮರೇ, ಹೇಳಿ, ಇದರ ದಿನಾಂಕ ಯಾವುದಾಗಿದೆ? ಇದರ ದಿನಾಂಕ ಕಾಣಿಸುತ್ತದೆಯೇ? ಮೊದಲು ನಿಮ್ಮೆಲ್ಲರ ದೃಷ್ಟಿಯಲ್ಲಿ ಬರಲಿ ಆಗ ವಿಶ್ವದಲ್ಲಿ ಬರುವುದು. ಅಮೃತ ವೇಳೆ ವಿಶ್ವದ ಚಕ್ರ ಹಾಕುವಾಗ ನೋಡಿ ನೋಡಿ, ಕೇಳಿ ಕೇಳಿ ಬಾಪ್‌ದಾದಾರವರಿಗೆ ದಯೆ ಬರುತ್ತದೆ. ಮೋಜಿನಲ್ಲಿಯೂ ಸಹ ಇದ್ದಾರೆ ಆದರೆ ಮೋಜಿನ ಜೊತೆ ಗೊಂದಲದಲ್ಲಿಯೂ ಇದ್ದಾರೆ. ಎಂದ ಮೇಲೆ ಬಾಪ್‌ದಾದಾರವರು ಕೇಳುತ್ತಾರೆ- ಹೇ ದಾತಾನ ಮಕ್ಕಳಾದ ಮಾಸ್ಟರ್ ದಾತರೇ! ಯಾವಾಗ ತಮ್ಮ ಮಾಸ್ಟರ್ ದಾತಾತನದ ಪಾತ್ರವನ್ನು ತೀವ್ರಗತಿಯಲ್ಲಿ ವಿಶ್ವದ ಮುಂದೆ ಪ್ರತ್ಯಕ್ಷ ಮಾಡುವಿರಿ? ಅಥವಾ ಇನ್ನೂ ಪರದೆಯ ಹಿಂದೆ ತಯಾರಾಗುತ್ತಿರುವಿರೆ? ತಯಾರಿ ಮಾಡುತ್ತಿರುವಿರಾ? ಓ ವಿಶ್ವ ಪರಿವರ್ತನೆಯ ನಿಮಿತ್ತ ಆತ್ಮರೇ! ಈಗ ವಿಶ್ವದ ಆತ್ಮರ ಮೇಲೆ ದಯೆ ತೋರಿಸಿ. ಆಗಲೇಬೇಕು, ಇದಂತೂ ನಿಶ್ಚಿತವಾಗಿದೆ ಹಾಗೂ, ನೀವು ನಿಮಿತ್ತ ಆತ್ಮರ ಮೂಲಕವೇ ಆಗಬೇಕು. ಎಂದ ಮೇಲೆ ಯಾವ ಮಾತಿನ ತಡವಿದೆ? ಬಾಪ್‌ದಾದಾರವರು ಈ ಒಂದು ಸೆರ್ಮನಿ(ಕಾರ್ಯಕ್ರಮ) ನೋಡಲು ಬಯಸುತ್ತಾರೆ, - ಪ್ರತಿಯೊಂದು ಬ್ರಾಹ್ಮಣ ಮಗುವಿನ ಹೃದಯದಲ್ಲಿ ಸಂಪನ್ನತೆ ಹಾಗೂ ಸಂಪೂರ್ಣತೆಯ ಬಾವುಟ ಹಾರುತ್ತಿರುವುದು ಕಾಣಿಸಲಿ. ಯಾವಾಗ ಪ್ರತಿಯೊಂದು ಬ್ರಾಹ್ಮಣನ ಒಳಗೆ ಸಂಪೂರ್ಣತೆಯ ಬಾವುಟ ಹಾರುವುದೋ ಆಗಲೇ ವಿಶ್ವದಲ್ಲಿ ತಂದೆಯ ಪ್ರತ್ಯಕ್ಷತೆಯ ಬಾವುಟ ಹಾರುವುದು. ಈ ಬಾವುಟ ಹಾರುವ ಕಾರ್ಯಕ್ರಮವನ್ನು ಬಾಪ್‌ದಾದಾರವರು ನೋಡಲು ಬಯಸುತ್ತಾರೆ. ಹೇಗೆ ಶಿವರಾತ್ರಿಯಂದು ಶಿವ ಅವತರಣೆಯ ಬಾವುಟ ಹಾರಿಸುತ್ತೀರೋ ಅದೇ ರೀತಿ ಈಗ ಶಿವಶಕ್ತಿ ಪಾಂಡವ ಅವತರಣೆಯ ನಗಾರಿ ಮೊಳಗಲಿ. ಒಂದು ಗೀತೆಯನ್ನು ಹಾಕುತ್ತಿರಲ್ಲವೇ-- ಶಿವ ಶಕ್ತಿಯರು ಬಂದರು. ಈಗ ವಿಶ್ವ ಶಿವನ ಜೊತೆಗೆ ಶಕ್ತಿಯರು, ಪಾಂಡವರು ಪ್ರತ್ಯಕ್ಷವಾದರು ಎಂಬ ಗೀತೆಯನ್ನು ಹಾಡಲಿ. ಎಲ್ಲಿಯವರೆಗೆ ಪರದೆಯ ಹಿಂದೆಯೇ ಇರುವಿರಿ! ಪರದೆಯಲ್ಲಿ ಇರುವುದು ಇಷ್ಟವಾಗುತ್ತದೆಯೇ? ಸ್ವಲ್ಪ ಸ್ವಲ್ಪ ಇಷ್ಟವಾಗುತ್ತದೆಯೇ! ಇಷ್ಟವಾಗುವುದಿಲ್ಲ ! ಎಂದ ಮೇಲೆ ಪರದೆಯನ್ನು ತೆಗೆಯುವವರು ಯಾರು? ಬಾಪ್‌ದಾದಾರವರು ತೆಗೆಯಬೇಕೆ? ಯಾರು ತೆಗೆಯುವರು? ಡ್ರಾಮಾ ತೆಗೆಯುತ್ತದೆಯೇ ಅಥವಾ ನೀವು ತೆಗೆಯುವಿರೇ? ನೀವೇ ತೆಗೆಯುತ್ತೀರಿ ಎಂದ ಮೇಲೆ ಏಕೆ ತಡ ಮಾಡುತ್ತೀರಿ? ಪರದೆಯ ಹಿಂದೆ ಇರುವುದು ಇಷ್ಟವಾಗುತ್ತದೆ ಎಂದುಕೊಳ್ಳುವುದೇ? ಅಷ್ಟೇ, ಕೇವಲ ಬಾಪ್‌ದಾದಾರವರಿಗೆ ಈಗ ಇದೊಂದೇ ಶ್ರೇಷ್ಠ ಆಸೆ ಇದೆ, ಎಲ್ಲರೂ ಗೀತೆ ಹಾಡಲಿ- ವಾಹ್! ಬಂದರು, ಬಂದುಬಿಟ್ಟರು, ಬಂದುಬಿಟ್ಟರು! ಆಗಬಹುದೇ? ನೋಡಿ ಎಲ್ಲಾ ದಾದಿಯರು ಹೇಳುತ್ತಾರೆ- ಆಗಬಹುದು. ಎಂದ ಮೇಲೆ ಇನ್ನೂ ಏಕೆ ಆಗುತ್ತಿಲ್ಲ? ಕಾರಣವೇನಾಗಿದೆ? ? ಎಲ್ಲರೂ ಈ

ರೀತಿ ಮಾಡುತ್ತಿರುವಿರಿ, ಹಾಗಾದರೆ ಕಾರಣ ಏನಾಗಿದೆ? (ಎಲ್ಲರೂ ಸಂಪನ್ನವಾಗಿಲ್ಲ) ಏಕೆ ಆಗಿಲ್ಲ? ದಿನಾಂಕವನ್ನು ಹೇಳಿ! (ದಿನಾಂಕವನ್ನು ಬಾಬಾ ನೀವೇ ಹೇಳಿ) ಬಾಪ್‌ದಾದಾರವರ ಮಹಾಮಂತ್ರ ನೆನಪಿದೆಯೇ? ಬಾಪ್‌ದಾದಾರವರು ಏನು ಹೇಳುತ್ತಾರೆ? "ಯಾವಾಗಲೋ ಅಲ್ಲ, ಈಗಲೇ". (ದಾದಿಯವರು ಹೇಳುತ್ತಿದ್ದಾರೆ- ಬಾಬಾ ಅಂತಿಮ ದಿನಾಂಕವನ್ನು ನೀವೇ ಹೇಳಿ ಎಂದು) ಒಳ್ಳೆಯದು. ಯಾವ ದಿನಾಂಕವನ್ನು ಹೇಳುತ್ತಾರೆ, ಅದರಲ್ಲಿ ತಮ್ಮನ್ನು ಮೋಲ್ಡ್ (ಪರಿವರ್ತನೆ) ಮಾಡಿ ನಿಭಾಯಿಸುತ್ತೀರಾ? ಪಾಂಡವರು ನಿಭಾಯಿಸುತ್ತೀರಾ? ಪಕ್ಕಾ? ಒಂದು ವೇಳೆ ಹೆಚ್ಚು ಕಡಿಮೆ ಮಾಡಿದರೆ ಏನು ಮಾಡುವುದು? (ನೀವು ದಿನಾಂಕವನ್ನು ಕೊಟ್ಟರೆ ಯಾರು ಸಹ ಹೆಚ್ಚು ಕಡಿಮೆ ಮಾಡುವುದಿಲ್ಲ) ಶುಭಾಶಯಗಳು. ಒಳ್ಳೆಯದು. ಈಗ ಡೇಟ್ ಹೇಳುತ್ತೇವೆ, ನೋಡಿ. ಬಾಪ್‌ದಾದಾರವರು ದಯಾ ಹೃದಯಿ ಆಗಿದ್ದಾರೆ, ಬಾಪ್‌ದಾದಾರವರು ದಿನಾಂಕವನ್ನು ಹೇಳುತ್ತಾರೆ, ಗಮನವಿಟ್ಟು ಕೇಳಿ.

ಬಾಪ್‌ದಾದಾರವರು ಎಲ್ಲಾ ಮಕ್ಕಳಿಂದ ಈ ಶ್ರೇಷ್ಠ ಭಾವನೆಯನ್ನು ಇಡುತ್ತಾರೆ, ಆಸೆಯನ್ನು ಇಡುತ್ತಾರೆ- ಕಡಿಮೆ ಎಂದರೆ ಕಡಿಮೆ ಆರು ತಿಂಗಳಿನಲ್ಲಿ, ಆರು ತಿಂಗಳು ಎಲ್ಲಿಯವರೆಗೂ ಪೂರ್ತಿಯಾಗುವುದು? (ಮೇ ತಿಂಗಳಿಗೆ) ಮೇ ತಿಂಗಳಿನವರೆಗೂ- ಮೇ, ಮೇ (ನಾನು, ನಾನು) ಎಂಬುದನ್ನು ಸಮಾಪ್ತಿ ಮಾಡಬೇಕು. ಬಾಪ್‌ದಾದಾರವರು ಆದರೂ ಸಹ ಮಾರ್ಜಿನ್ ಕೊಡುತ್ತಾರೆ ಕಡಿಮೆ ಎಂದರೆ ಕಡಿಮೆ ಈ ಆರು ತಿಂಗಳಿನಲ್ಲಿ, ಇದನ್ನು ಬಾಪ್‌ದಾದಾರವರು ಮೊದಲು ಸಹ ಹೇಳಿದ್ದರು ಹಾಗೂ ನಂತರದ ಸೀಸನ್ ನಲ್ಲಿಯೂ ಸಹ ಕೆಲಸವನ್ನು ಕೊಟ್ಟಿದ್ದರು- ತಮ್ಮನ್ನು ತಾವು ಜೀವನ್ ಮುಕ್ತ ಸ್ಥಿತಿಯ ಅನುಭವದಲ್ಲಿ ತನ್ನಿ. ಸತ್ಯಯುಗದ ಸೃಷ್ಟಿಯ ಜೀವನ ಮುಕ್ತಿ ಅಲ್ಲ, ಸಂಗಮ ಯುಗದ ಜೀವನ್ ಮುಕ್ತಿಯ ಸ್ಟೇಜ್. ಯಾವುದೇ ವಿಘ್ನ, ಪರಿಸ್ಥಿತಿಗಳು, ಸಾಧನಗಳು ಹಾಗೂ ನಾನು ಮತ್ತು ನನ್ನತನ, ದೇಹಾಭಿಮಾನದ ನಾನು ಮತ್ತು ನನ್ನದು, ಸೇವೆಯಲ್ಲಿ ನಾನು ನನ್ನದು, ಈ ಎಲ್ಲಾ ಪ್ರಭಾವಗಳಿಂದ ಮುಕ್ತರಾಗಿರಿ. ನಾನಂತೂ ಮುಕ್ತನಾಗಿರಲು ಬಯಸುತ್ತೇನೆ ಆದರೆ ಈ ವಿಘ್ನ ಬಂದು ಬಿಟ್ಟಿತು ಎಂದು ಹೇಳಬಾರದು. ವಿಷಯವೇ ಇಷ್ಟು ದೊಡ್ಡದಾಗಿತ್ತು. ಚಿಕ್ಕ ವಿಷಯವಾಗಿದ್ದರೆ ನಡೆದು ಹೋಗುತ್ತದೆ, ಇದು ಬಹಳ ದೊಡ್ಡ ವಿಷಯವಾಗಿತ್ತು, ಇದು ಬಹಳ ದೊಡ್ಡ ಪೇಪರ್ ಆಗಿತ್ತು, ದೊಡ್ಡ ವಿಘ್ನವಾಗಿತ್ತು, ದೊಡ್ಡ ಪರಿಸ್ಥಿತಿಯಾಗಿತ್ತು. ಎಷ್ಟೇ ದೊಡ್ಡದಕ್ಕಿಂತ ದೊಡ್ಡ ಪರಿಸ್ಥಿತಿ, ವಿಘ್ನ, ಸಾಧನಗಳ ಆಕರ್ಷಣೆ ಎದುರಿಸಲು ಬರಲಿ, ಎದುರಿಸುತ್ತದೆ ಇದನ್ನು ಮೊದಲೆ ಹೇಳಿಬಿಡುತ್ತೇವೆ ಆದರೆ ಕಡಿಮೆ ಎಂದರೆ ಕಡಿಮೆ ಆರು ತಿಂಗಳಿನಲ್ಲಿ 75% ಮುಕ್ತರಾಗಲು ಸಾಧ್ಯವೇ? ಬಾಪ್‌ದಾದಾರವರು 100 ಪರ್ಸೆಂಟ್ ಎಂದು ಹೇಳುತ್ತಿಲ್ಲ, 75% ಮುಕ್ಕಾಲು ಭಾಗ ಬಂದರೆ ಆಗ ಸಂಪೂರ್ಣತೆಯವರೆಗೂ ತಲುಪುವಿರಿ ಅಲ್ಲವೇ! ಹಾಗಾದರೆ ಆರು ತಿಂಗಳಿನಲ್ಲಿ, ಒಂದು ತಿಂಗಳಲ್ಲಿ ಅಲ್ಲ, ಆರು ತಿಂಗಳನ್ನು ಕೊಡುತ್ತಿದ್ದೇವೆ, ಅರ್ಧ ವರ್ಷ. ಈ ಡೇಟನ್ನು ನಿಗದಿ ಮಾಡಲು ಸಾಧ್ಯವೇ? ನೋಡಿ ದಾದಿಯರು ಹೇಳುತ್ತಿದ್ದಾರೆ - ಫಿಕ್ಸ್ ಮಾಡಿ, ದಾದಿಯರ ಆದೇಶವನ್ನಂತು ಪಾಲಿಸಬೇಕಲ್ಲವೇ! ಫಲಿತಾಂಶವನ್ನು ನೋಡಿ ಬಾಪ್‌ದಾದಾರವರು ಸ್ವತಹವಾಗಿಯೇ ಆಕರ್ಷಣೆಯಲ್ಲಿ ಬರುತ್ತಾರೆ, ಹೇಳುವ ಅವಶ್ಯಕತೆಯೂ ಬರುವುದಿಲ್ಲ. ಎಂದ ಮೇಲೆ ಆರು ತಿಂಗಳು ಹಾಗೂ 75%, 100% ಅಲ್ಲ ಅದಕ್ಕಾಗಿ ನಂತರ ಮುಂದೆ ಸಮಯವನ್ನು ಕೊಡುತ್ತೇವೆ. ಹಾಗಾದರೆ ಇದರಲ್ಲಿ ಸದಾ ಸಿದ್ದರಾಗಿದ್ದೀರಾ? ಸದಾ ಸಿದ್ಧ ಅಲ್ಲ ಆರು ತಿಂಗಳಿನಲ್ಲಿ ರೆಡಿ. ಇಷ್ಟವಿದೆಯೇ ಅಥವಾ ಸ್ವಲ್ಪ ಸಾಹಸ(ಧೈರ್ಯ) ಕಡಿಮೆ ಇದೆಯೇ, ಏನಾಗುವುದೋ ಗೊತ್ತಿಲ್ಲ? ಹುಲಿಯು ಬರುವುದು, ಬೆಕ್ಕು ಬರುವುದು, ಎಲ್ಲವೂ ಬರುವುದು ವಿಘ್ನಗಳು ಬರುವುದು, ಪರಿಸ್ಥಿತಿಗಳು ಬರುವುದು, ಸಾಧನಗಳು ವೃದ್ಧಿಯಾಗುವುದು ಆದರೆ ಸಾಧನಗಳ

ಪ್ರಭಾವದಿಂದ ಮುಕ್ತರಾಗಿರಬೇಕು. ಒಪ್ಪಿಗೆ ಇದೆ ಎಂದರೆ ಕೈಯೆತ್ತಿ., ಟಿ.ವಿಯನ್ನು ತಿರುಗಿಸಿ. ಚೆನ್ನಾಗಿ ಕೈ ಎತ್ತಿ, ಕೈ ಇಳಿಸಬೇಡಿ. ಒಳ್ಳೆಯ ದೃಶ್ಯವಾಗಿದೆ. ಒಳ್ಳೆಯದು. ಇನ್ ಅಡ್ವಾನ್ಸ್ (ಮುಂಚಿತವಾಗಿ) ಶುಭಾಶಯಗಳು.

ನಾವಂತೂ ಬಹಳ ಸಾಯಬೇಕಾಗುತ್ತದೆ ಎಂದು ಹೇಳಬೇಡಿರಿ, ಸಾಯಬೇಕಾಗುತ್ತದೆ, ಸಾಯಿರಿ ಅಥವಾ ಬದುಕಿರಿ ಆದರೆ ಆಗಲೇಬೇಕು. ಇಲ್ಲಿ ಸಾಯುವುದು ಮಧುರ ಸಾವಾಗಿದೆ, ಇಲ್ಲಿ ಸಾಯುವುದರಲ್ಲಿ ದುಃಖ ಬರುವುದಿಲ್ಲ, ಇಲ್ಲಿ ಸಾಯುವುದು ಅನೇಕರ ಕಲ್ಯಾಣಕ್ಕಾಗಿ ಸಾಯುವುದು, ಆದ್ದರಿಂದ ಈ ಸಾವಿನಲ್ಲಿ ಮಜಾ ಇದೆ. ದುಃಖವಿಲ್ಲ, ಸುಖವಿದೆ. ಯಾವುದೇ ನೆಪವನ್ನು ಹೇಳಬಾರದು, ಹೀಗಾದ ಕಾರಣ ಹೀಗಾಯಿತು ಎಂದು ನೆಪ ಹೇಳುವುದು ಇಲ್ಲಿ ನಡೆಯುವುದಿಲ್ಲ. ನೆಪ ಹೇಳುತ್ತೀರಾ? ಹೇಳುವುದಿಲ್ಲ ಅಲ್ಲವೇ. ಹಾರುವ ಕಲೆಯ ಆಟವನ್ನು ಆಡಿರಿ. ಬೇರೆ ಯಾವ ಆಟವನ್ನು ಆಡಬೇಡಿ. ಬೀಳುವ ಕಲೆಯ ಆಟವನ್ನು, ನೆಪ ಹೇಳುವ ಆಟ, ಬಲಹೀನತೆಗಳ ಆಟ ಇದೆಲ್ಲವೂ ಸಮಾಪ್ತಿಯಾಗಬೇಕು. ಹಾರುವ ಕಲೆಯ ಆಟ, ಸರಿಯಾಗಿದೆ! ಎಲ್ಲರ ಮುಖ ಅರಳಿದೆ. 6 ತಿಂಗಳ ನಂತರ ಮಿಲನ ಮಾಡಲು ಬಂದಾಗ ಮುಖ ಹೇಗಿರುವುದು. ಅಂದು ಸಹ ಫೋಟೋ ತೆಗೆಯುತ್ತೇವೆ.

ಡಬಲ್ ವಿದೇಶಿಯರು ಬಂದಿದ್ದೀರಲ್ಲವೇ, ಡಬಲ್ ಪ್ರತಿಜ್ಞೆ ಮಾಡುವ ದಿನ ಬಂದು ಬಿಟ್ಟಿದೆ ಅನ್ಯ ಯಾರನ್ನು ನೋಡಬೇಡಿ, ತಂದೆಯನ್ನು ನೋಡಿ, ಬ್ರಹ್ಮಾ ತಾಯಿಯನ್ನು ನೋಡಿ. ಅನ್ಯರು ಮಾಡಲಿ ಮಾಡದಿರಲಿ, ಮಾಡಿದರೂ ಸಹ ಅವರ ಪ್ರತಿ ದಯಾ ಭಾವನೆಯನ್ನು ಇಟ್ಟುಕೊಳ್ಳಿ. ಬಲಹೀನರಿಗೆ ಶುಭ ಭಾವನೆಯ ಬಲವನ್ನು ಕೊಡಿ, ಬಲಹೀನತೆಯನ್ನು ನೋಡಬೇಡಿ. ಇಂತಹ ಆತ್ಮರನ್ನು ತಮ್ಮ ಧೈರ್ಯದ ಕೈಯಿಂದ ಎದ್ದೇಳಿಸಿ, ಶ್ರೇಷ್ಠರನ್ನಾಗಿ ಮಾಡಿ. ಧೈರ್ಯದ ಜೊತೆಯು ಸದಾ ಸ್ವಯಂನ ಪ್ರತಿ ಹಾಗೂ ಸರ್ವರ ಪ್ರತಿ ಬೆಳೆಯುತ್ತಾ ಇರಲಿ. ಧೈರ್ಯದ ಕೈ ಬಹಳ ಶಕ್ತಿಶಾಲಿಯಾಗಿದೆ. ಹಾಗೂ ಧೈರ್ಯದ ಒಂದು ಹೆಜ್ಜೆ ಮಕ್ಕಳದ್ದು ಹಾಗೂ ಸಾವಿರ ಹೆಜ್ಜೆ ತಂದೆಯ ಸಹಯೋಗ ಎಂಬುದು ಬಾಪ್‌ದಾದಾರವರ ವರದಾನವಾಗಿದೆ. ನಿಸ್ವಾರ್ಥ ಪುರುಷಾರ್ಥದಲ್ಲಿ ಮೊದಲು ನಾನು. ನಿಸ್ವಾರ್ಥ ಪುರುಷಾರ್ಥ, ಸ್ವಾರ್ಥದ ಪುರುಷಾರ್ಥವಲ್ಲ, ಯಾರು ನಿಸ್ವಾರ್ಥ ಪುರುಷಾರ್ಥದಲ್ಲಿ ಮೊದಲೋ ಅವರೇ ಬ್ರಹ್ಮಾ ತಂದೆಯ ಸಮಾನ.

ಬ್ರಹ್ಮಾ ತಂದೆಯೊಂದಿಗೆ ಪ್ರೀತಿ ಇದೆ ಅಲ್ಲವೇ! ಆದ್ದರಿಂದಲೇ ಬ್ರಹ್ಮಾಕುಮಾರ ಹಾಗೂ ಬ್ರಹ್ಮಾಕುಮಾರಿ ಎಂದು ಕರೆಯಿಸಿಕೊಳ್ಳುತ್ತೀರಿ ಅಲ್ಲವೇ! ಕ್ಷಣದಲ್ಲಿ ಜೀವನ್ ಮುಕ್ತಿಯ ಆಸ್ತಿಯನ್ನು ತೆಗೆದುಕೊಳ್ಳಿ ಎಂದು ಚಾಲೆಂಜ್ ಮಾಡುತ್ತೀರಿ ಅಂದಾಗ ಈಗ ಕ್ಷಣದಲ್ಲಿ ತಮ್ಮನ್ನು ಮುಕ್ತರನ್ನಾಗಿ ಮಾಡಿಕೊಳ್ಳುವ ಗಮನವಿಡಿ. ಈಗ ಸಮಯವನ್ನು ಸಮೀಪ ತನ್ನಿ. ನಿಮ್ಮ ಸಂಪೂರ್ಣತೆಯ ಸಮೀಪತೆ, ಶ್ರೇಷ್ಠ ಸಮಯವನ್ನು ಸಮೀಪ ತರುವುದು. ಮಾಲೀಕರಾಗಿದ್ದೀರಿ(ಅಧಿಕಾರಿ) ಅಲ್ಲವೇ, ರಾಜರಾಗಿದ್ದೀರಿ ಅಲ್ಲವೇ, ಸ್ವರಾಜ್ಯ ಅಧಿಕಾರಿಯಾಗಿದ್ದೀರಿ ಅಲ್ಲವೇ? ಎಂದ ಮೇಲೆ ಆರ್ಡರ್ ಮಾಡಿ. ಈಗ ತಮ್ಮ ಮನಸ್ಸನ್ನು ನೋಡಿಕೊಳ್ಳಿ, ಏಕೆಂದರೆ ಮನಸ್ಸು ಮುಖ್ಯಮಂತ್ರಿಯಾಗಿದೆ ಎಂದ ಮೇಲೆ ರಾಜರಾದ ನೀವು ಮಂತ್ರಿಯಾದ ಮನಸ್ಸಿಗೆ ಒಂದು ಕ್ಷಣದಲ್ಲಿ ಆರ್ಡರ್ ಮಾಡಿ ಅಶರೀರಿ, ವಿದೇಹಿ ಸ್ಥಿತಿಯಲ್ಲಿ ಸ್ಥಿತ ಮಾಡಲು ಸಾಧ್ಯವೇ? ಒಂದು ಸೆಕೆಂಡಿನಲ್ಲಿ ಆರ್ಡರ್ ಮಾಡಿ. (ಐದು ನಿಮಿಷ ಡ್ರಿಲ್) ಒಳ್ಳೆಯದು.

**ಸದಾ ಲವಲೀನ ಹಾಗೂ ಲಕ್ಕಿ ಆತ್ಮರಿಗೆ, ಬಾಪ್‌ದಾದಾರವರ ಮೂಲಕ ಪ್ರಾಪ್ತಿಯಾಗಿರುವ ಸರ್ವಪ್ರಾಪ್ತಿಗಳ ಅನುಭವೀ ಆತ್ಮರಿಗೆ, ಸ್ವರಾಜ್ಯ ಅಧಿಕಾರಿಯಾಗಿ ಅಧಿಕಾರದ ಮೂಲಕ ಸ್ವರಾಜ್ಯ ಮಾಡುವಂತಹ ಶಕ್ತಿಶಾಲಿ ಆತ್ಮರಿಗೆ, ಸದಾ ಜೀವನ್ ಮುಕ್ತ ಸ್ಥಿತಿಯನ್ನು ಅನುಭವ ಮಾಡುವಂತಹ ಶ್ರೇಷ್ಠ ಆತ್ಮರಿಗೆ, ಭಾಗ್ಯ ವಿಧಾತನ ಮೂಲಕ ಶ್ರೇಷ್ಠ ಭಾಗ್ಯದ ಗೆರೆಯ ಮೂಲಕ ಅದೃಷ್ಟವಂತರಾದ ಆತ್ಮರಿಗೆ, ಸದಾ ಪವಿತ್ರತೆಯ ದೃಷ್ಟಿ, ವೃತ್ತಿಯ ಮೂಲಕ ಸ್ವಪರಿವರ್ತನೆ, ವಿಶ್ವ ಪರಿವರ್ತನೆ ಮಾಡುವಂತಹ ಅತಿ ಪವಿತ್ರ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ಡಬಲ್ ವಿದೇಶಿ ಅತಿಥಿಗಳೊಂದಿಗೆ (ಸಮಯದ ಕರೆಯ ಪ್ರೋಗ್ರಾಮ್ ನಲ್ಲಿ ಬಂದಿರುವಂತಹ ಅತಿಥಿಗಳೊಂದಿಗೆ):** ಎಲ್ಲರೂ ತಮ್ಮ ಸ್ವೀಟ್ ಹೋಂನಲ್ಲಿ, ಮಧುರ ಪರಿವಾರದಲ್ಲಿ ತಲುಪಿದ್ದೀರಿ ಅಲ್ಲವೇ! ಈ ಚಿಕ್ಕ ಮಧುರ ಪರಿವಾರ ಇಷ್ಟವಾಗುತ್ತದೆ ಅಲ್ಲವೇ! ಹಾಗೂ ನೀವು ಸಹ ಎಷ್ಟು ಮಧುರರಾಗಿದ್ದೀರಿ! ಎಲ್ಲದಕ್ಕಿಂತ ಮೊದಲು ಪರಮಾತ್ಮ ಪ್ರಿಯರಾಗಿದ್ದೀರಿ! ಆಗಿದ್ದೀರಿ ಅಲ್ಲವೇ! ಆಗಿದ್ದೀರಾ ಅಥವಾ ಇನ್ನೂ ಆಗಬೇಕಾಗಿದೆಯಾ? ನೋಡಿ, ನಿಮ್ಮೆಲ್ಲರನ್ನು ನೋಡಿ ಎಲ್ಲರೂ ಎಷ್ಟು ಖುಷಿಯಾಗುತ್ತಿದ್ದಾರೆ. ಏಕೆ ಖುಷಿಯಾಗುತ್ತಿದ್ದಾರೆ? ಎಲ್ಲರ ಚಹರೆಯನ್ನು ನೋಡಿ ಎಲ್ಲರೂ ಖುಷಿಯಾಗುತ್ತಿದ್ದಾರೆ. ಏಕೆ ಖುಷಿಯಾಗುತ್ತಿದ್ದಾರೆ? ಏಕೆಂದರೆ ಅವರು ತಿಳಿದಿದ್ದಾರೆ ಇವರೆಲ್ಲರೂ ಭಗವಂತನ ಸಂದೇಶ ವಾಹಕರಾಗಿ ಆತ್ಮರಿಗೆ ಸಂದೇಶವನ್ನು ತಲುಪಿಸುವ ನಿಮಿತ್ತ ಆತ್ಮರಾಗಿದ್ದಾರೆ. (ಐದು ಖಂಡದವರು ಇದ್ದಾರೆ) ಎಂದ ಮೇಲೆ ಐದು ಖಂಡಗಳಲ್ಲಿ ಸಂದೇಶ ತಲುಪಿ ಬಿಡುವುದು, ಸಹಜವಾಗಿದೆ ಅಲ್ಲವೇ. ಬಹಳ ಒಳ್ಳೆಯ ಯೋಜನೆ ತಯಾರಿಸಿದ್ದೀರಿ. ಇದರಲ್ಲಿ ಪರಮಾತ್ಮನ ಶಕ್ತಿಯನ್ನು ತುಂಬಿ ಹಾಗೂ ಪರಿವಾರದ ಸಹಾಯವನ್ನು ತೆಗೆದುಕೊಂಡು ಮುಂದುವರೆಯುತ್ತಾ ಇರಿ. ಎಲ್ಲರ ಸಂಕಲ್ಪಗಳು ಬಾಪ್‌ದಾದಾರವರ ಬಳಿ ತಲುಪುತ್ತಿದೆ. ಬಹಳ ಒಳ್ಳೊಳ್ಳೆಯ ಸಂಕಲ್ಪಗಳು ನಡೆಯುತ್ತಿದೆ ಅಲ್ಲವೇ! ಯೋಜನೆಗಳು ತಯಾರಾಗುತ್ತಿವೆ ಯೋಜನೆಗಳನ್ನು ಪ್ರತ್ಯಕ್ಷವಾಗಿ ತರುವುದರಲ್ಲಿ ಧೈರ್ಯ ನಿಮ್ಮದು ಹಾಗೂ ಸಹಯೋಗ ತಂದೆಯದು ಮತ್ತು ಬ್ರಾಹ್ಮಣ ಪರಿವಾರದವರದ್ದು. ಕೇವಲ ನಿಮಿತ್ತರಾಗಬೇಕು ಅಷ್ಟೇ ಬೇರೆ ಯಾವುದೇ ಪರಿಶ್ರಮ ಪಡಬೇಕಾಗಿಲ್ಲ. ನಾನು ಪರಮಾತ್ಮ ಕಾರ್ಯದಲ್ಲಿ ನಿಮಿತ್ತನಾಗಿದ್ದೇನೆ. ಯಾವುದೇ ಕಾರ್ಯದಲ್ಲಿ ಬಂದರೂ ಸಹ ಬಾಬಾ ನಾನು ನಿಮಿತ್ತ ಸೇವಾರ್ಥ ತಯಾರಾಗಿದ್ದೇನೆ, ನಾನು ಇನ್ಸ್ಟ್ರುಮೆಂಟ್ ಆಗಿದ್ದೇನೆ ನಡೆಸುವವರು ಸ್ವತಹವಾಗಿ ನಡೆಸುತ್ತಾರೆ. ಈ ನಿಮಿತ್ತ ಭಾವ ನಿಮ್ಮ ಚಹರೆಯಲ್ಲಿ ನಿರ್ಮಾಣ ಹಾಗೂ ನಿರ್ಮಾನ ಭಾವವನ್ನು ಪ್ರತ್ಯಕ್ಷ ಮಾಡುವುದು. ಮಾಡಿಸುವವರು ನಿಮಿತ್ತರನ್ನಾಗಿ ಮಾಡಿ ಕಾರ್ಯವನ್ನು ಮಾಡಿಸುತ್ತಾರೆ. ಮೈಕ್ ನೀವು ಹಾಗೂ ಶಕ್ತಿ ತಂದೆಯದ್ದು. ಹಾಗಾದರೆ ಸಹಜವಾಗಿದೆ ಅಲ್ಲವೇ. ನಿಮಿತ್ತರಾಗಿ ನೆನಪಿನಲ್ಲಿ ಹಾಜೀರ್ ಆಗಿಬಿಡಿ, ಅಷ್ಟೇ ನಿಮ್ಮ ಮುಖ, ನಿಮ್ಮ ಚಲನೆ ಸ್ವತಹವಾಗಿಯೇ ಸೇವೆಯ ನಿಮಿತ್ತವಾಗಿ ಬಿಡುವುದು ಕೇವಲ ಮಾತಿನ ಮೂಲಕ ಸೇವೆ ಅಲ್ಲ ಆದರೆ ಚಲನೆಯ ಮೂಲಕವೂ ನಿಮ್ಮ ಆಂತರಿಕ ಖುಷಿ ಚೆರೆಯಿಂದ ಕಾಣಿಸುತ್ತದೆ. ಇದಕ್ಕೆ ಅಲೌಕಿಕತೆ ಎಂದು ಹೇಳಲಾಗುತ್ತದೆ. ಈಗ ಅಲೌಕಿಕ ಆಗಿಬಿಟ್ಟಿರಿ ಅಲ್ಲವೇ. ಲೌಕಿಕತನವಂತು ಸಮಾಪ್ತಿಯಾಯಿತು ಅಲ್ಲವೇ. ನಾನು ಆತ್ಮನಾಗಿದ್ದೇನೆ- ಇದು ಅಲೌಕಿಕವಾಗಿದೆ. ನಾನು ಇಂತಹವನಾಗಿದ್ದೇನೆ- ಇದು ಲೌಕಿಕತೆ. ಹಾಗಾದರೆ ಯಾರಾಗಿದ್ದೇನೆ? ಅಲೌಕಿಕನೇ ಅಥವಾ ಲೌಕಿಕನೇ? ಅಲೌಕಿಕ ಆಗಿದ್ದೀರಿ ಅಲ್ಲವೇ! ಒಳ್ಳೆಯದು. ಬಾಪ್‌ದಾದಾರವರ ಹಾಗೂ ಪರಿವಾರದ ಸಮ್ಮುಖದಲ್ಲಿ ತಲುಪಿಬಿಟ್ಟಿರಿ, ಇದು ಬಹಳ ಒಳ್ಳೆಯ ಸಾಹಸವನ್ನು ಇಟ್ಟುಕೊಂಡಿದ್ದೀರಿ. ನೋಡಿ, ನೀವು ಸಹ ಕೋಟಿಯಲ್ಲಿ ಕೆಲವರು ಬಂದಿದ್ದೀರಿ ಅಲ್ಲವೇ. ಎಷ್ಟು ಗುಂಪು ಇತ್ತು, ಅದರಲ್ಲಿ ಎಷ್ಟು ಗುಂಪು ಬಂದಿದ್ದೀರಿ. ಎಂದರೆ ಕೋಟಿಯಲ್ಲಿ ಕೆಲವರು

ಬಂದಿದ್ದೀರಿ ಅಲ್ಲವೇ. ಒಳ್ಳೆಯದು ಬಾಪ್‌ದಾದಾವರಿಗೆ ಈ ಗುಂಪು ಇಷ್ಟವಾಗಿದೆ. ಹಾಗೂ ಇಲ್ಲಿ ನೋಡಿ ಎಷ್ಟು ಖುಷಿಯಾಗುತ್ತಿದ್ದಾರೆ. ನಿಮಗಿಂತ ಹೆಚ್ಚು ಇವರು ಖುಷಿಪಡುತ್ತಿದ್ದಾರೆ ಏಕೆಂದರೆ ಸೇವೆಯ ರಿಟರ್ನ್ ಸಮ್ಮುಖದಲ್ಲಿ ನೋಡಿ ಖುಷಿಪಡುತ್ತಿದ್ದಾರೆ. ಖುಷಿಪಡುತ್ತಿರುವಿರಿ ಅಲ್ಲವೇ. ಪರಿಶ್ರಮದ ಫಲ ಸಿಕ್ಕಿಬಿಟ್ಟಿತ್ತು. ಒಳ್ಳೆಯದು. ಈಗಂತೂ ಬಾಲಕ ಸೋ ಮಾಲೀಕರಾಗಿದ್ದೀರಿ. ಬಾಲಕ ಮಾಸ್ಟರ್ ಆಗಿದ್ದಾರೆ. ಮಕ್ಕಳಿಗೆ ಸದಾ ಮಾಸ್ಟರ್ ಎಂದು ಹೇಳಲಾಗುತ್ತದೆ. ಒಳ್ಳೆಯದು.

ರಿವೈಸ್ ಕೋರ್ಸ್ 11-11-2000.

***ಸಂಪೂರ್ಣತೆಯ ಸಮೀಪತೆಯಿಂದ ಪ್ರತ್ಯಕ್ಷತೆಯ ಶ್ರೇಷ್ಠ ಸಮಯವನ್ನು ಸಮೀಪಕ್ಕೆ ತೆಗೆದುಕೊಂಡು ಬನ್ನಿ***

ನಿಮ್ಮ ಅದೃಷ್ಟ ರೇಖೆಯನ್ನು ಜ್ಯೋತಿಷಿಗಳು ಬರೆಯಲಿಲ್ಲ ಸ್ವಯಂ ಭಾಗ್ಯ ವಿಧಾತ ನಿಮ್ಮ ಅದೃಷ್ಟ ರೇಖೆಯನ್ನು ಗೀಚಿದ್ದಾರೆ ಮತ್ತು ಎಷ್ಟು ದೊಡ್ಡ ಗ್ಯಾರಂಟಿಯನ್ನು ಕೊಟ್ಟಿದ್ದಾರೆ? ಅದೃಷ್ಟ ರೇಖೆ 21 ಜನ್ಮಗಳು ಅವಿನಾಶಿಯಾಗಿರುವ ಗ್ಯಾರಂಟಿಯನ್ನು ಪಡೆದಿದ್ದೀರಿ. ಒಂದು ಜನ್ಮಕ್ಕಾಗಿ ಅಲ್ಲ 21 ಜನ್ಮದಲ್ಲಿ ಯಾವಾಗಲೂ ದುಃಖ, ಅಶಾಂತಿಯ ಅನುಭೂತಿ ಇರುವುದಿಲ್ಲ ಸದಾ ಸುಖಿಯಾಗಿ ಇರುತ್ತೀರಿ ಜೀವನದಲ್ಲಿ ಮೂರು ವಿಷಯಗಳು ಅವಶ್ಯಕ ಆರೋಗ್ಯ, ಸಂಪತ್ತು, ಮತ್ತು ಸಂತೋಷ ಈ ಮೂರು ಎಲ್ಲರಿಗೂ ತಂದೆಯಿಂದ ವಾರಸತ್ವದ ರೂಪದಲ್ಲಿ ಲಭಿಸಿದೆ ಎಂದು ತಿಳಿಸುತ್ತಾ ಬಾಪ್‌ದಾದಾ ತನ್ನ ಪವಿತ್ರವಾದ, ಶ್ರೇಷ್ಠವಾದ, ಅದೃಷ್ಟವಂತವಾದ, ಮಧುರವಾದ ಮಕ್ಕಳನ್ನು ನೋಡುತ್ತಾ ತಿಳಿಸುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪವಿತ್ರತೆಯ ಶಕ್ತಿಯಿಂದ ಪ್ರಕೃತಿಯನ್ನು ಸಹ ಸತೋ ಪ್ರಧಾನವಾಗಿ, ಪವಿತ್ರವಾಗಿ ತಯಾರು ಮಾಡುವ ಪ್ರಕೃತಿ ಜೀತ್ ಆತ್ಮನಾಗಿದ್ದೇನೆ.

2. ನಾನು ಶ್ರೇಷ್ಠಾತಿ ಶ್ರೇಷ್ಠ ಭಗವಂತನನ್ನು ಗುರುತಿಸಿ, ಇಡೀ ವಿಶ್ವದಲ್ಲಿ ಪವಿತ್ರವಾದ, ಶ್ರೇಷ್ಠವಾದ ಆತ್ಮನಾಗಿದ್ದೇನೆ.

3. ನಾನು ಯಾರನ್ನಾದರೂ ಭೇಟಿಯಾಗುತ್ತಿರುವಾಗ ಸಹೋದರರು ಎಂಬ ವೃತ್ತಿಯಿಂದ, ಆತ್ಮಿಕ ದೃಷ್ಟಿಯಿಂದ, ಕಲ್ಯಾಣ ಭಾವನೆಯಿಂದ, ಪ್ರಭು ಪರಿವಾರ ಎಂಬ ಭಾವನೆಯಿಂದ ಭೇಟಿಯಾಗುತ್ತಿದ್ದೇನೆ.

4. ಸ್ವಯಂ ಭಾಗ್ಯವಿಧಾತ ನನ್ನ ರೇಖೆಯನ್ನು ಬರೆದು, 21 ಜನ್ಮಗಳಿಗಾಗಿ ಸದಾ ಸುಖಿಯಾಗಿರುವ ಹಾಗೆ ಗ್ಯಾರಂಟಿ ಕೊಟ್ಟಿದ್ದಾರೆ.

5. ತಂದೆಯಿಂದ ನನಗೆ ಆರೋಗ್ಯ, ಸಂಪತ್ತು ಮತ್ತು ಸಂತೋಷವು ವಾರಸತ್ವದ ರೂಪದಲ್ಲಿ ಸಿಕ್ಕಿದೆ.

6. ನಾನು ಜನ್ಮ ಪಡೆಯುತ್ತಿದಂತೆಯೇ ತಂದೆಯ ವಾರಸತ್ವಕ್ಕೆ ಅಧಿಕಾರಿಯಾಗಿದ್ದೇನೆ.

7. ನಾನು ಪರಮಾತ್ಮನ ನೆನಪಿನಿಂದ ಪ್ರತಿಯೊಂದು ಹೆಜ್ಜೆಯಲ್ಲಿ ಪದಮಾ ಪದಂ ಸಂಪಾದನೆ ಮಾಡುವ ಶ್ರೇಷ್ಠಾತ್ಮ, ಇಡೀ ಪ್ರಪಂಚದಲ್ಲಿ ಶ್ರೀಮಂತ ಆತ್ಮ.

8. ನಾನು ಮಸ್ತಕದಲ್ಲಿ ಹೊಳೆಯುತ್ತಿರುವ ಭಾಗ್ಯದ ನಕ್ಷತ್ರವಾಗಿದ್ದೇನೆ.

9. ನನಗೆ ಪರಮಾತ್ಮನ ಈ ಮಿಲನ, ಪರಮಾತ್ಮನ ಪ್ರೀತಿ, ಪರಮಾತ್ಮನ ವಾರಸತ್ವ, ಪರಮಾತ್ಮನ ಪ್ರಾಪ್ತಿಗಳು ಈಗಲೇ ಲಭಿಸಿದೆ, "ಈಗಿಲ್ಲದಿದ್ದರೆ ಎಂದಿಗೂ ಇಲ್ಲ" ಎಂಬ ಸ್ಮೃತಿ ಇದೆ.

10. ನಾನು ಮಾಸ್ಟರ್ ದಾತ ಸ್ಥಿತಿಯ ನನ್ನ ಪಾತ್ರವನ್ನು ತೀವ್ರ ವೇಗದಿಂದ ವಿಶ್ವದ ಮುಂದೆ ಪ್ರತ್ಯಕ್ಷ ಮಾಡಿ ಸುಂದರ ಶ್ರೇಷ್ಠ ಸಮಯವನ್ನು ಸಮೀಪವಾಗಿ ತರುವ ವಿಶ್ವಸೇವಾದಾರಿಯಾಗಿದ್ದೇನೆ.

11. ಯಾವಾಗಲೋ ಅಲ್ಲ ಈಗಲೇ ಎಂಬ ಬಾಪ್‌ದಾದಾರವರ ಮಹಾಮಂತ್ರ ನನಗೆ ಸದಾ ಸ್ಮೃತಿಯಲ್ಲಿದೆ.

12. ನಾನು ಯಾವುದೇ ವಿಘ್ನ, ಪರಿಸ್ಥಿತಿಗಳು, ಸಾಧನಗಳು ಹಾಗೂ ನಾನು ಮತ್ತು ನನ್ನತನ, ದೇಹಾಭಿಮಾನದ ನಾನು ಮತ್ತು ನನ್ನದು, ಸೇವೆಯಲ್ಲಿ ನಾನು ಮತ್ತು ನನ್ನದು, ಇವೆಲ್ಲವುಗಳ ಪ್ರಭಾವದಿಂದ ಮುಕ್ತವಾಗಿ ಸಂಗಮಯುಗೀ ಜೀವನ್ ಮುಕ್ತ ಸ್ಥಿತಿಯನ್ನು ಅನುಭವ ಮಾಡಿಕೊಳ್ಳುತ್ತಿದ್ದೇನೆ.

13. ನಾನು ಹಾರುವ ಕಲೆಯಲ್ಲಿರುವ ಫರಿಶ್ತಾ.

14. ನಾನು ಬಲಹೀನ ಆತ್ಮರಿಗೆ ಶುಭ ಭಾವನೆಯಿಂದ ಶಕ್ತಿಯನ್ನು ಕೊಟ್ಟು ಧೈರ್ಯವೆಂಬ ಕೈಯಿಂದ ಎತ್ತಿ ವೃದ್ಧಿ ಮಾಡುವ ಮಾಸ್ಟರ್ ದಯಾಸಾಗರನು.

15. ನಾನು ಧೈರ್ಯದಿಂದ ಒಂದು ಹೆಜ್ಜೆಯನ್ನು ಹಾಕುತ್ತಾ ತಂದೆಯಿಂದ ಸಾವಿರ ಹೆಜ್ಜೆಯ ಸಹಯೋಗವನ್ನು ಪಡೆಯುತ್ತಿದ್ದೇನೆ.

16. ನಾನು ನಿಸ್ವಾರ್ಥ ಪುರುಷಾರ್ಥವನ್ನು ಮಾಡುತ್ತಾ ಬ್ರಹ್ಮ ತಂದೆಯ ಸಮಾನವಾಗಿರುವ ಬಾಪ್ ಸಮಾನ ಸ್ವರೂಪ.

17. ನಾನು ಸಂಪೂರ್ಣತೆಯ ಸಮೀಪತೆಯನ್ನು, ಶ್ರೇಷ್ಠ ಸಮಯವನ್ನು ಸಮೀಪವಾಗಿ ತಂದು ನನ್ನ ಮನಸ್ಸು ಎಂಬ ಮಂತ್ರಿಯನ್ನು ಆರ್ಡರ್ ಮಾಡಿ(ಆಜ್ಞಾಪಿಸಿ) ಕ್ಷಣದಲ್ಲಿ ಆಶರೀರಿ, ವಿದೇಹಿ ಸ್ಥಿತಿಯಲ್ಲಿ ಸ್ಥಿತ ಮಾಡುವ ಸ್ವರಾಜ್ಯಾಧಿಕಾರಿ ಆಗಿದ್ದೇನೆ.